ಅಂತೆಲ್ಲ ಬಡಬಡಿಸಿ ಅಳತೊಡಗಿ ಇವನೂ ಬರ್ತೇನೆ ಶ್ಯಾಮಲಾ ಬರದೇ ಇರ್ತೇನೆಯಾ... ಅಂತೆಲ್ಲ ಭಾವುಕನಾಗಿದ್ದ.

ಈಗ ಅಣ್ಣನಿಗೆ ಕೆಲ ಸಂಗತಿಗಳನ್ನ ಹೇಳದಿದ್ದರೆ ಎಡವಟ್ಟಾಗುತ್ತದೆ ಅನ್ನುವುದು ಅರಿವಾಗಿ ಕೇಶವ ಅವನೆದುರು ಕುಳಿತ. ಸ್ವತಃ ತನಗೆ ನೆನಪಿದ್ದ ಕೇಶವನಿಗೂ ಎದುರು ಕುಳಿತ ಕೇಶವನಿಗೂ ಇರುವ ಅಪಾರ ವ್ಯತ್ಯಾಸದಿಂದ ಶುರುವಾಗಿ ಮನಸಿಗಿಳಿಯುತ್ತ ತನ್ನ ಮೂವತ್ತಮೂರು ವರ್ಷಗಳನ್ನು ಸಾರಾಸಗಟಾಗಿ ವಜಾಮಾಡಿಕೊಂಡಿದ್ದೇನೆ ಅನ್ನುವುದನ್ನು ಅರಗಿಸಿಕೊಳ್ಳುವುದು ಕಷ್ಟವಾಯಿತು. ಬೆಳಗ್ಗೆ ಕನ್ನಡಿಯಲ್ಲಿ ಕಂಡ ತನ್ನ ಚಹರೆ ವಿಷಾದವಾಗಿ ಅಣಕಿಸಿತು. 'ವತ್ಸಲಾ ಎಲ್ಲಿ? ಊರಿಂದ ಕರಸಿ...' ಅಂದದ್ದಕ್ಕೆ, 'ಅತ್ತಿಗೆ ಈಗ ಹುಡುಗಿಯಾಗಿರ್ತಾಳೆ ಅಂದ್ಕೊಂಡ್ಯ... ಅವಳೂ ಮುದುಕಿಯಾಗಿರ್ತಾಳೆ' ಅಂದ ಕೇಶವ ಮತ್ತೆ ಮಾತು ಬೆಳೆಯುವ ಆತಂಕಕ್ಕೆ, 'ರಾತ್ರಿ ಎಷ್ಟಾಗದೆ ಗೊತ್ತದ್ಯ ಅಣ್ಣ, ಈಗ ಮಲಗು' ಅಂದವ ಲೈಟು ಆರಿಸಿ ರೂಮಿಗೆ ಹೋದ.

ಆಗ ಅವನಿಗೆ ಇಪ್ಪತ್ತೆಂಟು ತನಗೆ ಇಪ್ಪತ್ತಾರು, ಚಂದ್ರ ತನಗಿಂತ ಒಂದೂವರೆ ವರ್ಷಕ್ಕೆ ಕಿರಿಯ. ಕೆಳಗೆ ಮೂರುಜನ ತಂಗಿಯರು, ಎಲ್ಲ ಒಂದೂವರೆ ಎರಡು ವರ್ಷ ಅಂತರದವರು. ಆವತ್ತು ತಲೆ ತುಂಬ ಕತ್ತಲೆ ಹೊತ್ತು, ಓಡಾಡುವ ಮಾಂಸದ ಮುದ್ದೆಯಲ್ಲದೆ ಇನ್ನೇನು ಅಲ್ಲದ ಇವನನ್ನು ಇಲ್ಲವಾಗಿಸಿಬಿಟ್ಟರೆ ಅನ್ನುವ ಆಲೋಚನೆ ಕ್ಷಣಕ್ಕಾದರೂ ಸುಳಿದದ್ದು ಹೌದಲ್ಲವ ಅಂತ ಅಂತರಾತ್ಮ ನೆನಪಿಸಿತು. ತಪ್ಪಿಸಿಕೊಳ್ಳುವಂತೆ ಆ ಕಡೆ ಹೊರಳಿದ. ಹೆಂಡತಿಗೂ ನಿದ್ದೆ ಬಂದಿಲ್ಲ, ಆದರೆ ಏನಾದರೂ ಕೇಳಿದರೆ ತಾನು ಸಿಡಿಯುತ್ತೇನೆ ಅಂತ ಸುಮ್ಮನಿದಾಳೆ ಅನ್ನುವುದು ಗೊತ್ತಾಗುತ್ತಿತ್ತು. ಸುದ್ದಿಯಾಗಲೇ ಒಬ್ಬಳಿಗೆ ತಲುಪಿದೆ. ಅವಳು ಎಲ್ಲರಿಗೂ ಇಷ್ಟರಲ್ಲೆ ಬಿತ್ತರಿಸದೆ ಇರುವ ಪೈಕಿಯೆ ಅಲ್ಲ. ಎಲ್ಲ ಒಂದೇ ಗುಂಪು. ರಂಡೆಯರು, ಇವರಿಂದಲೆ ಎಲ್ಲ. ಹೊಳೆದಂಡೆಗೆ ಹತ್ತಿರ ತೆಂಗಿನ ತೋಟ. ಮಂಜು ಹೆಗಡೇರು ಒಳ್ಳೇ ಒಡದೀರು. ಅಪ್ಪ ಚನ್ನಾಗಿ ವಾಗಾತಿಗೆ ಮಾಡಿ ಒಂದು ಗರೀನೂ ಹಳದಿ ಆಗದಹಾಗೆ ಇಟ್ಟಿದ್ದ. ಆವತ್ತು ಸರಕಾರ ತಂದ ಕಾನೂನಿನಲ್ಲಿ ಎಷ್ಟೋ ವರ್ಷದಿಂದ ಒಕ್ಕಲಾಗಿದ್ದ ತಾವು ಒಡೆಯರಾಗಿದ್ದೆವು. ಊರಲ್ಲಿದ್ದವರೆಲ್ಲ ಫಾರ್ಮು ತುಂಬುವ ಭರಾಟೆಯಲ್ಲಿದ್ದಾಗ ತಾವೂ ರಿಕಾರ್ಡು ನೋಡಿ ಹಿರಿಯರ ಸಲಹೆಯಂತೆ ಡಿಕ್ಲರೇಶನ್ ಕೊಡುವಾಗ ಅಣ್ಣನ ಹೆಸರು ಹಾಕಿ ಅವನ ಹೆಸರಿಗೆ ಆಸ್ತಿಯಾಗಿತ್ತು. ಅತ್ತಿಗೆಯ ಸಮಸ್ಯೆಯಲ್ಲಿ ಈ ಮೂರೂ ಹೆಣ್ಮಕ್ಕಳು ಓಡಾಡಿ ಹಾತೊರೆದು ಸಹಕಾರ ಕೊಟ್ಟಿದ್ದರು. ಅಮಾಯಕರು, ತಾನು ಹೇಳುವುದೆ ತಡ ಮುಂದೂ ಒಪ್ಪಿಕೊಂಡುಬಿಡುತ್ತಾರೆ ಅಂದುಕೊಂಡ ತಾನು ಕೊನೆಗೆ ಬೆಪ್ಪು. ಬೆಕ್ಕಿಗೆ ಮ್ಯಾಂವ್ ಅನ್ನಲು ಕಲಿಸಬೇಡ ಅಂದರು ನಯವಾಗಿಯೆ. ಮದುವೆಯಾಗಿ ಬೇರೆ ಮನೆಗೆ ಸೇರಿದ್ದೀರ ನೀವು. ನಿಮಗೆ ಇದನ್ನು ಒರೆಸಿದರೆ ದೇವರು ಮೆಚ್ಚಲಿಕ್ಕಿಲ್ಲ. ಅಂದದ್ದಕ್ಕೆ ಅದೇನು ಇದ್ದರೂ ಅಣ್ಣ ಅಲ್ವ? ನಮ್ಮ ಕರ್ತವ್ಯ ಮಾಡೂದಿಲ್ಲ ಅಂದ್ರೆ ದೇವರು ಶಾಪ ಕೊಡದೆ ಬಿಟ್ಟಾನೆಯ. ಮನೇವ್ರನ್ನ ಒಪ್ಪಿಸೊ ಜವಾಬ್ದಾರಿ ನಮದು. ನಮ್ಮ ಒಡಹುಟ್ಟಿದವ, ನಾವು ನೋಡಕಂತ್ರು, ಚಿಂತೆ ಬ್ಯಾಡ ಅಂದರು. ನೆನಪಿನ ಶಕ್ತಿ ಕಳೆದುಹೋಗಿದೆ ಅನ್ನುವುದಕ್ಕೆ ಚಿಕಿತ್ಸೆ ಕೊಡಿಸಿದ ಆಸ್ಪತ್ರೆಯ ಕಾಗದಗಳು ಇವರ ಕೈ ಸೇರಿವೆ. ಉಪಾಯದಲ್ಲಿ ಕೇಳಿದರೆ ಎಲ್ಲೋ ಸರಿಯಾಗಿ ಇಟ್ಟೆ, ಎಷ್ಟು ಹುಡುಕಿದರೂ ಸಿಗ್ತಾ ಇಲ್ಲ ಅನ್ನುತ್ತಾರೆ ಸಮಾಧಾನದಲ್ಲಿ. 'ಆಸ್ತಿಗೆಲ್ಲ ಯಜಮಾನ, ಬೀಗದ ತಯಾರಿ ಕಾರಬಾರು ಕಮ್ಮಿ ಇತ್ತ? ಪಾಪ, ಹಿಂಗಾಯ್ತು. ಒಂದು ಕಾಗದಕ್ಕೂ ಸಹಿ ಹಾಕೂ ಹಾಂಗಿಲ್ಲ...' ಅಂತ ಪರೋಕ್ಷವಾಗಿ ಸೂಚನೆ ಕೊಡುತ್ತಾರೆ. ಆಸ್ತಿ ಬರೆಸಿಕೊಳ್ಳಲಿಕ್ಕೆ ನೋಡಬೇಡ, ತಮಗೂ ಹಕ್ಕಿದೆ ಅಂತ ತಾನೆ ಇವರ ಒಳ ಅರ್ಥ? ಹಡಬೆಗಳು. 'ಆಯ್ತು, ಅಷ್ಟೆಲ್ಲಾ ಹೇಳತಿ, ಸದ್ಯಕ್ಕೆ ನೀ ಕರಕಂಡು ಹೋಗು. ಯಾವಾಗ ಬೇಕಾದ್ರು ನಮಗೊಂದು ಪತ್ರ ಬರಿ, ಮರುದಿನ ನಾ ಕರಕಂಡು ಹೋಗೂಕೆ ಹಾಜರಾಗ್ತೆ, ಆಯ್ತಾ?' ಅಂತ ಒಪ್ಪಿದರು. ಊರಲ್ಲಿದ್ದ ಆಸ್ತಿಯನ್ನು ತಾನು ಮಾಡಿಸುವುದೇನೋ ಹೌದು, ಒಂದಲ್ಲ ಒಂದು ಕಾರಣ ಹೇಳಿ ವರ್ಷ ವರ್ಷ ದುಡ್ಡು ಸೂಗೆಯುವುದನ್ನು ಇವರು ಮುಂದುವರಿಸಿಕೊಂಡೆ ಬಂದಿದ್ದಾರೆ. ಇವನನ್ನು